ಶ್ರೀ ಬಿ. ಚೈರಪ್ಪಾಜಿ.—ತುಮಕೂರಿನಲ್ಲಿ ಟ್ರೈನಿಂಗ್ ಕಾಲೇಜು ಇದ್ದರೂ ಕೂಡ ಅಲ್ಲಿಯ ವರನ್ನು ಬೆಂಗಳೂರು, ಬಳ್ಳಾರಿಗೆ ಟ್ರೈನಿಂಗಿಗಾಗಿ ಕಳಿಸುವುದರಿಂದ ಉಪಾಧ್ಯಾಯರುಗಳು ಅಲ್ಲಿಗೆ ಹೋಗಲು ಇಷ್ಟಪಡದೆ ಇರುವುದು ಕಾರಣವಾಗಿದೆ; ಯಾಕೆಂದರೆ ಪಕ್ಕದಲ್ಲಿ ಕಾಲೇಜು ಇದೆ. ಆದುದರಿಂದ ಪಕ್ಕದಲ್ಲಿ ಇರತಕ್ಕ ಕಾಲೇಜಿಗೆ ಡೆಪ್ಯೂಟ್ ಮಾಡುವ ವ್ಯವಸ್ಥೆ ಮಾಡುತ್ತೀರಾ ? 1961 ರಿಂದೀಚೆಗೆ ಕೆಲಸಕ್ಕೆ ಸೇರಿರತಕ್ಕಂಥ ಎಸ್.ಎಸ್.ಎಲ್.ಸಿ. ಉಪಾಧ್ಯಾಯರಿಗೆ ಎಷ್ಟು ವರ್ಷಗಳಲ್ಲಿ ಟ್ರೈನಿಂಗ್ ಕೊಡುವುದಕ್ಕೆ ಸಾಧ್ಯ ?

ಶ್ರೀ ಎಸ್. ಆರ್. ಕಂಠಿ.—ಎರಡು ಪ್ರಶ್ನೆಗಳನ್ನು ಅವರು ಕೇಳಿದ್ದಾರೆ. ತುಮಕೂರು ಜಿಲ್ಲೆಯವರನ್ನು ತುಮಕೂರು ಕಾಲೇಜಿನಲ್ಲಿ ಇಡಬೇಕು ಬೆಂಗಳೂರು, ಬಳ್ಳಾರಿಗೆ ಕಳಿಸಬಾರದು ಎಂದು. ಇದನ್ನು ಹಾಗೆ ಮಾಡುವುದಕ್ಕಾಗುವುದಿಲ್ಲ. ಕಾಲೇಜುಗಳಿಗೆ ನರಿಯಾಗಿ ಟೀಚರ್ಸ್ ಹಂಚಿಕೊಡಬೇಕಾಗುತ್ತದೆ, ಬೆಂಗಳೂರಿಗೆ ಬಂದರೆ ಅವರು ಅಂಡಮಾನಕ್ಕೆ ಹೋದ ಹಾಗೇನೂ ಆಗುವುದಿಲ್ಲ. ಬಳ್ಳಾರಿಗೆ ಹೋದರೆ ನಿಕೋಬಾರಕ್ಕೆ ಹೋದ ಹಾಗೆ ಏನೂ ಆಗುವುದಿಲ್ಲ. ಅವರಿಗೆ ಸಂಪೂರ್ಣ ಸಂಬಳ ಕೊಡುತ್ತೇವೆ. ಆದುದರಿಂದ ಅವರು ಅಲ್ಲಿಗೆ ಹೋಗಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸೌತ್ ಕೆನರಾದಲ್ಲಿ ಟ್ರೈನ್ಡ್ ಉಪಾಧ್ಯಾಯರು ಇರುವಾಗ ಅನ ಟ್ರೈನ್ಡ್ ಉಪಾಧ್ಯಾಯರನ್ನು ಏಕೆ ಕಳಿಸಲಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಅದು ರಿಕ್ರೂಟ್‌ಮೆಂಟ್ ಅಲ್ಲ. ಸೌತ್ ಕೆನರಾಕ್ಕೆ ಕೂರ್ಗಿನಿಂದ ಕೆಲವರು ಟ್ರಾನ್ಸ್‌ಫರ್ ಆದವರು ಅನ್ ಟ್ರೈನ್ಡ್ ಇದ್ದರು. ಅವರಿಗೆ ಟ್ರೈನಿಂಗ್ ಕೊಡುತ್ತೇವೆ.

Registered Unions for M.S.R.T.C. Workers.

*Q**.—356. **Sri J. L. KABADI** (Baradol).—

Will the Government be pleased to state :—

(*a*) the number and names of registered unions that were working in the year 1963 in Belgum Division for M.S.R.T.C. workers ;

(*b*) what was the number of membership declared for the year ending March 1963 to the Registrar of Trade Unions? ;

(*c*) whether it is a fact that the workers of one union gave a complaint to the Registrar of Trade Unions and Labour Commissioner that the other union has declared false membership account for the year ending March 1963 ;

(*d*) whether it is a fact that the Registrar of Trade Unions and Commissioner of Labour have conducted an enquiry in this connection ;

(*e*) what action has been taken against the false declaration of membership by the Commissioner of Labour and Reilgstrar of Trade Unions ?

A.—**Sri D. DEVARAJ URS** (Minister for Transport and Tourism).—

(*a*) (i) State Transport Workers' Union (Belgaum Division) Belgum, 904, Fort Road, Belgaum. (Reg. No. 1370/22-5-1953).

(ii) State Transport Kamgar Sabha, 3003, Kade Bazaar, (Reg. No. 264/19-3-1958).

(*b*) (i) State Transport Workers' Union (Belgaum Division) Belgaum (No return was submitted for the year ending 31st March 1963).

(ii) State Transport Kamgar Sabha, 300, Kade Bazaar, Belgaum. (99).

(*c*) Yes.

(*d*) Yes.

(*e*) No action was taken as the complaint was not proved.

ಶ್ರೀ ಜೆ. ಎಲ್. ಕಬಾಡಿ.—ರೂಲ್ಸ್ ಪ್ರಕಾರ 31-3-63ವರೆಗೆ ಎಷ್ಟು ಜನ ಸದಸ್ಯರು ಇದ್ದಾರೆಂದು ಕಾಮಗಾರ ಸಭಾ ಡಿಕ್ಲೇರ್ ಮಾಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—112 ಜನ ಸದಸ್ಯರು.

ಶ್ರೀ ಜೆ. ಎಲ್. ಕಬಾಡಿ,—ರಾಜ್ಯದ ಸಾರಿಗೆ ಕಾಮಗಾರ ಸಭಾಸದಸ್ಯರು 93 ಇದ್ದರೂ ಕೂಡ 489 ಜನ ಸದಸ್ಯರು ಎಂದು ಡಿಕ್ಲೇರ್ ಮಾಡಿದ್ದಾರೆ. ಇದನ್ನು ಎನ್‌ಕ್ವಾಯರಿ ಮಾಡಬೇಕೆಂದು ಕಂಪ್ಲೇಂಟ್ ಕೊಟ್ಟಿದ್ದಾರಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ಇರಬಹುದು. ನಮ್ಮ ಅಧಿಕಾರಿಯು ಹೋಗಿ ಪರಿಶೀಲನೆ ಮಾಡಿದಾಗ್ಗೆ ಕಾನೂನ ಪ್ರಕಾರ ಮೆಂಬರ್ಸ್ ಇದ್ದವರನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಮೂರು ತಿಂಗಳು ಒಂದೇ ಸಮನೇ ಚಂದಾ ಕೊಡದೇ ಇದ್ದರೆ ಅಂಥವರು ಸದಸ್ಯರಾಗುವುದಿಲ್ಲ. ಅಂಥವರನ್ನು ಬಿಟ್ಟು ಲೆಕ್ಕ ಮಾಡುತ್ತಾರೆ.

ಶ್ರೀ ಜೆ. ಎಲ್. ಕಬಾಡಿ.—ಬೇರೆ ಯೂನಿಯನ್ ಕಂಪ್ಲೇಂಟ್ ಕೊಟ್ಟ ಮೇರೆ 23-3-65ಕೆ ಕಂಪ್ಲೇಂಟ್ ಬಗ್ಗೆ ಎನ್‌ಕ್ವಾಯರಿ ನಡೆಯಿತು ಅಲ್ಲವೆ ?

ಶ್ರೀ ಡಿ. ದೇವರಾಜ ಅರಸ್.—ವಿಚಾರಣೆ ನಡೆಸಲಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಈಗ ಕಾನೂನು ರೀತ್ಯ ಆಕೌಂಟ್ಸ್ ಮತ್ತು ಬುಕ್ಸ್ ಅಧಾರದ ಮೇಲೆ ಅಧಿಕೃತವಾಗಿ ಮೆಂಬರ್ಸ್ ಜಾಸ್ತಿ ಇದ್ದಾರೆ ಏನಾದರು ಕ್ರಮ ತೆಗೆದುಕೊಳ್ಳಲು ಸಿದ್ಧರಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಯಾವುದಾದರೂ ಒಂದು ಎಲೆಕ್ಷನ್ ಸಂಬಂಧಪಟ್ಟ ಹಾಗೆ, ಅವರು ಕಾನೂನು ರೀತ್ಯ ಇರುವುದಕ್ಕಿಂತಲ್ಲೂ ಹೆಚ್ಚಿಗೆ ಸದಸ್ಯರು ಇದ್ದಾರೆ ಎಂದು ಸುಳ್ಳು ವರದಿ ಕೊಟ್ಟಿದ್ದರೆ ಎಲಕ್ಷನ್‌ನ್ನು ರದ್ದು ಮಾಡಬೇಕಾಗಿ ಬರಬಹುದು. ಸಂಬಂದಪಟ್ಟಂತೆ ಇನ್ನೂ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದುಕೊಳ್ಳಬಹುದು.

ಶ್ರೀ ಸಿದ್ಧಯ್ಯ ಕಾಶಿಮಠ.—ಟ್ರೇಡ್ ಯೂನಿಯನ್ ಮತ್ತು ಲೇಬರ್ ಕಮೀಷನರು ಎನ್‌ಕ್ವೈರಿ ಮಾಡಿದನಂತರ, ಅವರು ಕಾಮಗಾರಿ ನಂಸ್ಥೆಕೊಟ್ಟಿದ್ದು ಸುಳ್ಳು ಹೇಳಿಕೆ ಎಂದು ಹೇಳಿಕೆ ಕೊಟ್ಟಿದ್ದಾರೆ, ಇದರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ಎಲೆಕ್ಷನ್ ಮಾಡುವ ಸಂದರ್ಭದಲ್ಲಿ ಹೆಚ್ಚಾಗಿ ಕೊಟ್ಟಿದ್ದರು ಈಗ ವರ್ಕ್ಸ್ ಕಮಿಟಿ ಎಲೆಕ್ಷನ್ ಮಾಡುವ ಸಂದರ್ಭದಲ್ಲಿ ಸದಸ್ಯರು ಕಮ್ಮಿ ಇದ್ದಾರೆ ಎಂದು ಹೇಳುತ್ತಾರೆ. ಅವರು ಇನ್ನೇನಾದರು ಬೇರೆ ಉಪಯೋಗ ಪಡೆಯುವುದು ಇದ್ದರೆ ಆಗ ಇದನ್ನು ಕೊಡಬೇಕೇ, ಬಿಡಬೇಕೆ ಎನ್ನುವ ಪ್ರಶ್ನೆ ಬಂದಾಗ ಈ ಸದಸ್ಯರ ಇಳುವರಿ ಸಂಖ್ಯೆಯನ್ನು ಯೋಚನೆ ಮಾಡಲಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—1962-63ನೇ ಇಸವಿ ಮಾರ್ಚ್ ಅಂತ್ಯದಲ್ಲಿದ್ದ ಸದಸ್ಯರುಗಳ ಸಂಖ್ಯೆ 99 ಎಂದು ಹೇಳಿದ್ದೀರಿ. ಲೇಬರ್ ಕಮೀಷನರ್ ಇದರ ಬಗ್ಗೆ ಎನ್‌ಕ್ವೈರಿ ಮಾಡಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ತಿಳಿಸುತ್ತೀರಾ. ಒಂದು ವೇಳೆ ಪಜಾ ಆಗಿದ್ದರೆ ಮತ್ತೊಮ್ಮೆ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ —ಇದರ ಬಗ್ಗೆ 2 ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು, ಮೊದಲನೇದು, ಮೆಂಬರ್‌ಷಿಪ್, ಎರಡನೇಯದು ಹಾಜರಿ ಇರುವ ಸದಸ್ಯರ ಸಂಖ್ಯೆ, ಅದನ್ನು ಪರಿಶೀಲನೆ ಮಾಡಿ ನಮ್ಮ ಗಮನಕ್ಕೆ ಜಾಸ್ತಿ ಅಥವಾ ಕಮ್ಮಿ ಎಂದು ಬರಬೇಕೆಂದು, ಅಮೇಲೆ

(ಶ್ರೀ ಡಿ. ದೇವರಾಜ್ ಅರಸ್)

ಆಕೌಂಟ್ಸ್‌ನ್ನು ವರ್ಷ ವರ್ಷ ಕೊಟ್ಟಿದ್ದಾರೆಯೇ ಇಲ್ಲವೇ ಎಂದು. ಅಲ್ಲದೆ ಸಂಘಗಳು ಹೆಚ್ಚು ಸದಸ್ಯರುಗಳನ್ನು ಇಟ್ಟುಕೊಂಡು ಉಪಯೋಗ ಪಡೆಯುತ್ತಿದ್ದರೆ ಅದರ ಮೇಲೆ ಎಷ್ಟರಮಟ್ಟಿಗೆ ಕ್ರಮ ಕೆಗೆದುಕೊಳ್ಳಬೇಕು ಎಂದು ವಿಚಾರ ಮಾಡಬೇಕಾಗುತ್ತದೆ.

Sri SIDDAIAH KASHIMATH.—May I know whether this Kamagari Union is affiliated to the Mysore State Union ?

Sri D. DEVARAJ URS.—I don't understand what that Mysore State Union is.

ಅಧ್ಯಕ್ಷರು.—ಶ್ರೀ ಎಸ್. ಪಿ. ಫಾಯದೆಯವರು 392ನೇ ಪ್ರಶ್ನೆ ಕೇಳಬಹುದು.

Exploitation of the Sweet Water Rivers for Irrigation Purposes

*Q.—392. Sri S. P. PHAYADE (Ankola) [on behalf of SRI R. S. HEGDE (Honnavar)].—

Will the Government be pleased to state :—

the steps Government propose to take for the exploitation of the sweet water rivers in the North Kanara District for Irrigation purposes ?

A.—Sri S. NIJALINGAPPA (Chief Minister).—

Following 7 Projects have been teken up for invesatigation to harness Sweet Water Rivers in North Kanara District for Irrigation Purposes :

1 Durgadahalla Project,
2 Attivare Project.
3 Durgi Project.
4 Kadpa Project.
5 Kalinadi Project.
6 Salkod Project.
7 Aversa Project.

ಶ್ರೀ ಎಸ್. ಪಿ. ಫಾಯದೆ.—7 ಯೋಜನೆಗಳನ್ನು ಕೈಗೊಳ್ಳಲಾಗಿದೆಯೆಂದು ಹೇಳಿದ್ದೀರಿ, ಈ ಯೋಜನೆಗಳು ಯಾವ ಯಾವ ಹಂತದಲ್ಲಿವೆ ?

ಶ್ರೀ ಎಸ್. ನಿಜಲಿಂಗಪ್ಪ.—ನಾನಾ ಹಂತದಲ್ಲಿವೆ. ದುರ್ಗದಹಳ್ಳ ಯೋಜನೆಯ ಅಂದಾಜು ಪೂರೈಸಿದೆ, ಮುಂಧಿನ ವರ್ಷ ಪುನಃ ಸರಿಯಾಗಿ ನೋಡಿ ಪ್ರಾರಂಭ ಮಾಡಬಹುದು. ಅತ್ತಿವರೆ ಯೋಜನೆ ತಯಾರಾಗುತ್ತಿದೆ. ಬಾಕಿ ಯೋಜನೆಗಳು ನಾನಾ ಹಂತಗಳಲ್ಲ ಇವೆ.

ಶ್ರೀ ಎಸ್. ಪಿ. ಫಾಯದೆ.—4ನೇ ಯೋಜನೆಯಲ್ಲಿ ಮುಗಿಸುವ ಧ್ಯೇಯವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಿನ ಪ್ರಕಾರ ದುರ್ಗದಹಳ್ಳ ಯೋಜನೆಯನ್ನು 4ನೇ ಯೋಜನೆಯಲ್ಲ ತೆಗೆದುಕೊಳ್ಳಬಹುದು, ಉಳಿದವು ಬಹುಶಃ ತಡವಾಗಬಹುದು, 4ನೇ ಯೋಜನೆಯಲ್ಲ ಬರುವುದಿಲ್ಲ, ಖಂಡಿತವಾಗಿ 5ನೇ ಯೋಜನೆಯಲ್ಲ ಬರುತ್ತವೆ.